1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ.20925-2024

ಸಿಡಬ್ಲೂ - 5ಪಿಡಬ್ಲೂ-5

ಸಾಕ್ಷಿದಾರರ ಹೆಸರು : ಪ್ರಸನ್ನಕುಮಾರ
ತಂದೆಯ ಹೆಸರು : ಅಶ್ವತಪ್ಪ
ವಯಸ್ಸು : 34 ವರ್ಷ
ಕೆಲಸ : ಖಾಸಗಿ ಕೆಲಸ
ವಾಸ : ಚಿಕ್ಕಬಳ್ಳಾಪುರ

ಸಾಕ್ಷಿಯನ್ನು ದಿನಾಂಕಃ 20-12-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು 2016 ರಿಂದ ಏರಟೆಲ್ ಡಿಸ್ಟ್ರುಬ್ಯೂಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ಮೊದಲ ಬಾರಿಗೆ 4 ಜಿ ನ್ನು ಜಾರಿಗೆ ತಂದಾಗ ಅದಕ್ಕೆ ಒಂದು ರೂ. ಕರೆನ್ಸಿಯನ್ನು ಹಾಕಿ ಸೀಮ್ ನ್ನು ಅಪಗ್ರೇಡ್ ಮಾಡಿದರೆ ಅದರಿಂದ ನಮಗೆ ರೂ. 50 ಕಮೀಷನ್ ಬರುತ್ತಿತ್ತು. ಆರೋಪಿಯ ಆ ರೀತಿಯಾಗಿ ಅಪಗ್ರೇಡ್ ಆಗಿರುವ ಸೀಮ್ ಗಳನ್ನು ತರೆಯಿಸಿಕೊಂಡು ಒಂದು ರೂಪಾಯಿಯ ರಿಚಾರ್ಜ ಮಾಡಿ ರೂ. 50 ಕಮೀಪ್ನ್ ಪಡದುಕೊಳ್ಳುತ್ತಿದ್ದರು. ಸದರಿ ಹಣವನ್ನು ಬೇರೆ ರಿಟೇಲ್ ಅಂಗಡಿಯವರಿಗೆ ಕರೆನ್ಸಿ ಮಾರಾಟ ಮಾಡಲು ನೀಡುತ್ತಿದ್ದರು. ಆ ಕಾರಣ ಅದರಿದ ನನಗೆ ನಷ್ಟಉಂಟಾಗುತ್ತಿತ್ತು. ಈ ಬಗ್ಗೆ ನಾನು ಚಾಸಾ 6 ಮತ್ತು ಕಿರಣ ಜಾದವ್ ಎಂಬುವವರಿಗೆ ಮೇಲ್ ಮಾಡಿ ಈ ಮೇಲಿನ ವಿಚಾರವನ್ನು ತಿಳಿಸಿರುತ್ತೇನೆ.

ನಂತರ ಇಬ್ಬರೂ ರಿಟೇಲ್‌ಗಳಿಗಂದ ಪ್ಯಾನ್ಸಿ ಸಂಖ್ಯೆಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಸದರಿ ಮಾಹಿತಿಯನ್ನು ಸಹ ಮೇಲ್ ಮೂಲಕ ತಿಳಿಸಿರುತ್ತೇನೆ. ಆ ರೀತಿ ಆಗಿ ನಾನು ಚಾಸಾ 6 ಮತ್ತು ಕಿರಣ ಜಾದವ್ ರವರಿಗೆ ಮೇಲ್ ಮಾಡಲಾದ ಅಟ್ಯಾಚ್‌ಮೆಂಟ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮೇಲ್ ಮಾಡಲಾದ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ನಿಪಿ. 5 ಎಂದು ಗುರುತಿಸಲಾಯಿತು.

ಸಾಕ್ಷಿಯು ಫೇಸಬುಕ್ ಸ್ಕ್ರೀನ್ ಶಾರ್ಟಗಳನ್ನು ತಾನು ಚಾಸಾ 27 ರವರಿಗೆ ನೀಡಿರುವುದಾಗಿ ನೋಡಿ ಗುರುತಿಸಿದ್ದು ಅವುಗಳು ದೋಷಾರೋಪಣ ಪತ್ರ ಪುಟಸಂಖ್ಯೆ 212 ರಿಂದ 233 ರವರೆಗಿನ ದಾಖಲೆಗಳಾಗಿರುತ್ತವೆ ಅವುಗಳನ್ನು ಒಟ್ಟಾಗಿ ನಿಪಿ. 6 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರು ಪಾಟೀ ಸವಾಲನ್ನು ಮಾಡಲು ಸಮಯಾವಕಾಶವನ್ನು ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.</u>

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ